**ದಿನಾಂಕಃ 13-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿ ಪರವಾಗಿ ಶ್ರೀ.ಪಿ.ಡಿ.ಟಿ. ವಕೀಲರಿಂದಃ-**

ಕ್ರಯದ ಮಾತುಕತೆಯಾಗುವ ಕಾಲಕ್ಕೆ ಯಾರು ಯಾರು ಇದ್ದರು ಎಂಬ ಬಗ್ಗೆ ನನಗೆ ಪೂರ್ಣ ಮಾಹಿತಿ ಇದೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕ್ರಯದ ವ್ಯವಹಾರಕ್ಕೆ ಸಂಬಧಿಸಿದಂತೆ ಶ್ರೀದರ್ ಹಸರು ಮತ್ತು ಪಾತ್ರದ ಬಗ್ಗೆ ಸಂಪೂರ್ಣವಾಗಿ ತಿಳಿಸಿರುತ್ತೇನೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡುವ ಕಾಲಕ್ಕೆ ಶ್ರೀದರ್ ರವರ ಪಾತ್ರದ ಬಗ್ಗೆ ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಕ್ರಯದ ಮಾತುಕತೆಗೆ ವಾದಿಗಳು ನನ್ನನ್ನು ಕರೆದಿರುತ್ತಾರೆ. ಕ್ರಯದ ಮಾತುಕತೆಗೆ ಬರುವಂತೆ 1 ನೇ ವಾದಿಯ ಅಂಗಡಿ ಹತ್ತಿರ ಕರೆದಿರುತ್ತಾರೆ. ನಾನು ಸಾಮಾನ್ಯವಾಗಿ 1 ನೇ ವಾದಿಯ ಅಂಗಡಿ ಹತ್ತಿರ ಹೋಗುತ್ತೇನೆ ಆಗ 1 ನೇ ವಾದಿ ಜಮೀನು ತೆಗೆದುಕೊಳ್ಳುತಿದ್ದೇನೆ ಬನ್ನಿ ಎಂದು ನನ್ನನ್ನು ಕರೆದರು. ಆಗ ವೇಳೆ ಬೆಳಗ್ಗೆ 11.30 ಗಂಟೆಯಾಗಿತ್ತು. ಕರೆದ ದಿವಸವೇ ಹೋಗಿದ್ದೇನಾ ಅಥವಾ ಯಾವತ್ತು ಹೋದೆ ಎಂದು ನನಗೆ ನೆನಪಿಲ್ಲ. ದಿ.01.12.2019 ರಂದು ಕ್ರಯದ ಮಾತುಕತೆಗೆ ಬರಬೇಕು ಎಂದು ನನಗೆ ವಾದಿ ತಿಳಿಸಿರುತ್ತಾರೆ. ವಾದಿಗಳು ನನ್ನ ಕರೆದ ದಿವಸವೇ ದಿ.01.12.2019 ಆಗಿತ್ತು. ಪ್ರತಿವಾದಿಯ ಮನೆಗೆ ನಾವು ಬೆಳಗ್ಗೆ 11.45 ಗಂಟೆಗೆ ಹೋಗಿರುತ್ತೇವೆ. ನನ್ನನ್ನು ಕರೆದಾಗ ವಾದಿಗಳು ಮತ್ತು ಶ್ರೀಧರ್ ರವರು ಇದ್ದರು. ಸ್ವತಃ ಮುಂದುವರೆದು ಹೇಳುತ್ತಾರೆ, ಕೃಷ್ಣಪ್ಪರವರ ಗಾಡಿಯಲ್ಲಿ ಪ್ರತಿವಾದಿಯ ಮನೆಗೆ ಬಂದರು. ವಾದಿಗಳು ಮತ್ತು ನಾನು ಮತ್ತು ಶ್ರೀಧರ್ ನಮ್ಮಗಳ ಗಾಡಿಯಲ್ಲಿ ಹೋಗಿರುತ್ತೇವೆ. 2 ನೇ ವಾದಿ ನನ್ನ ಸಹಪಾಠಿ.

ನಾನು 2 ನೇ ವಾದಿಯ ಅಂಗಡಿ ಹತ್ತಿರ ಹೋದಾಗ ನಾವು ಜಮೀನಿನ ಕ್ರಯದ ಬಗ್ಗೆ ಹಿಂದೆ ಮಾತು ಕತೆ ಮಾಡಿದ್ದೇವೆ ಎಂದು ನನಗೆ ತಿಳಿಸಿಲ್ಲ. ಕ್ರಯದ ಮಾತು ಕತೆ ಪ್ರಾರಂಭವಾದ್ದಾಗಿಂದ ಕೊನೆಯವರೆಗೂ ಇದ್ದೆ. ಕ್ರಯದ ಮಾತುಕತೆ

ದಿ.01.12.2019 ರ ಮೊದಲು ಪ್ರತಿವಾದಿಯ ಜೊತೆ ಆಗಿತ್ತು. ವಾದಿಗಳು ಮತ್ತು ಪ್ರತಿವಾದಿಗಳು ಹಿಂದೆ ಕ್ರಯದ ಮಾತುಕತೆ ಆಗಿರುವ ಬಗ್ಗೆ ನನಗೆ ತಿಳಿಸಿದ್ದರು. ನನಗೆ ತಿಳಿಸಿದ ಮಾಹಿತಿ ಪ್ರಕಾರ ಈ ಹಿಂದೆ ಹಣದ ನಿಷ್ಕರ್ಷೆ ಆಗಿರಲಿಲ್ಲ. ನಮ್ಮಗಳ ಸಮಕ್ಷಮವೇ ಕ್ರಯದ ಹಣದ ನಿಷ್ಕರ್ಷೆ ಆಗಿರುತ್ತದೆ.

ನಾನು ಪ್ರತಿವಾದಿಯ ಮನೆಗೆ 2 ಬಾರಿ ಹೋಗಿರುತ್ತೇನೆ. ಮೊದಲನೇ ಸಾರಿ ಪ್ರತಿವಾದಿಯ ಮನೆಗೆ ಹೋದಾಗ ನಾನು ಮತ್ತು ಕೃಷ್ಣಪ್ಪ ದಾವಾ ಆಸ್ತಿಯ ಪಹಣಿಯನ್ನು ನೋಡಿಲ್ಲ. ಪ್ರತಿವಾದಿ ನಮ್ಮ ಸಮಕ್ಷಮ ದಾವಾ ಆಸ್ತಿಯ ಪಹಣಿಯನ್ನು ವಾದಿಗೆ ತೋರಿಸಿಲ್ಲ. 1.00 ಗಂಟೆ ಅವದಿಯವರಗೆ ಕ್ರಯದ ಮಾತಕತೆಯಾಗಿರುತ್ತದೆ. ನಮ್ಮಗಳ ಸಮಕ್ಷಮ ನೊಂದಣಿಗೆ ಕ್ರಯ ಪತ್ರ ನೊಂದಣಿಗೆ ಯಾವುದಾದರು ಅಡೆ ತಡೆ ಇದೆ ಎಂಬುದರ ಬಗ್ಗೆ ಮಾತುಕತೆ ಆಗಿಲ್ಲ. ಕರಾರಿನಲ್ಲಿ ಪರಸ್ಪರ ಷರತ್ತು ಹಾಕುರವುದರ ಬಗ್ಗೆ ನಮ್ಮ ಸಮಕ್ಷಮ ಮಾತುಕತೆಯಾಗಿದೆ. ಮಾತುಕತೆಯಾದಗಿನಿಂದ ಈವತ್ತಿನ ವರೆಗೂ ಒಮ್ಮೆ ದಾವಾ ಆಸ್ತಿಯ ಪಹಣಿಯನ್ನು ನೋಡಿರುತ್ತೇನೆ. ಪಹಣಿ ನೋಡಿದಾಗ ಯಾವಾ ಕಾರಣಕ್ಕಾಗಿ ಉಪ ನೊಂದಾಣಾದಿಕಾರಿ ಕಚೇರಿಯಲ್ಲಿ 11-ಇ-ಸ್ಕೆಚ್ ಒತ್ತಾಯುಸುತ್ತಾರೆಂಬ ಬಗ್ಗೆ ನನಗೆ ಮಾಹಿತಿ ಇದೆ. ಪಹಣಿಯಲ್ಲಿ ಒಬ್ಬರ ಹೆಸರಿತ್ತು. ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪಹಣಿಯಲ್ಲಿರುವ ಒಟ್ಟು ವಿಸ್ತಿರ್ಣಕ್ಕೆ ಎಂಬುದರ ಬಗ್ಗೆ ಮಾಹಿತಿ ಇದೆ. ಒಟ್ಟು ವಿಸ್ತೀರ್ಣದ ಪೈಕಿ ಅರ್ಧ ವಿಸ್ತೀರ್ಣ ಕ್ರಯವಾದರೆ ಮಾತ್ರ 11-ಇ-ಸ್ಕೆಚ್ ಬೇಕು ಎಂದರೆ ಸರಿ.

ದಾವಾ ಆಸ್ತಿಯನ್ನು ವಾದಿಗಳಿಗೆ ಮಾರಾಟ ಮಾಡುವ ಬಗ್ಗೆ ಮಾತುಕತೆಯಾಗಿರುತ್ತದೆ. ಸ್ವತಃ ಮುಂದುವರೆದು ಹೇಳುತ್ತಾರೆ, ವಾದಿಗಳು ಒಟ್ಟು ವಿಸ್ತೀರ್ಣದಲ್ಲಿ ಅರ್ದ ಅರ್ಧ ಭಾಗ ಮಾಡಿಕೊಳ್ಳಬೇಕು ಎಂಬ ಕಾರಣದಿಂದ 11-ಇ-ಸ್ಕೆಚ್ ಬೇಕು ಎಂದು ಅಂದುಕೊಂಡಿದ್ದರೇನೋ. ಮಾತುಕತೆ ಸಂಧರ್ಬದಲ್ಲಿ

ಇಷ್ಟು ವಿಸ್ತೀರ್ಣ 2ನೇ ವಾದಿಗೆ ಎಂಬುದರ ಬಗ್ಗೆ ಮಾತುಕತೆಯಾಗಿಲ್ಲ. ಕ್ರಯದ ಕರಾರು ಪತ್ರವನ್ನು ಬರೆದಿದ್ದು ದಿ.09.12.2019. ಕರಾರು ಪತ್ರದ ಷೆಡ್ಯೂಲ್ ನಲ್ಲಿ ಈ ಭಾಗ 1ನೇ ವಾದಿಗೆ ಈ ಭಾಗ 2ನೇ ವಾದಿಗೆ ಎಂದು ಚಕ್ಕು ಬಂದಿ ಹಾಕಿ ನಮೂದು ಮಾಡಿದ್ದಾರೋ ಎಂದು ನನಗೆ ಗೊತ್ತಿಲ್ಲ.

ಕ್ರಯದ ಕರಾರನ್ನು ನಾನು ನೋಡಿದ್ದೇನೆ. ದಿ.09.12.2019 ರಂದು 11-ಇ-ಸ್ಕೆಚ್ ಮಾಡಿಸಿಕೊಂಡು ಇಂತಿತ್ತೋರು ಇಂತ ಆಸ್ತಿ ತೆಗೆದುಕೊಳ್ಳಿ ಎಂದು ಮಾತುಕತೆಯಾಗಿರುತ್ತದೆ. ಮೇಲೆ ಹೇಳಿದ ಮಾತುಕತೆ ಬಗ್ಗೆ ಕರಾರಿನಲ್ಲಿ ಯಥಾವತ್ತಾಗಿ ಬರೆದಿದ್ದಾರೋ ನಾನು ನೋಡಿಲ್ಲ. 4 ತಿಂಗಳ ಒಳಗಡೆ ಕ್ರಯ ಪತ್ರ ಬರೆದುಕೊಡ ಬೇಕು ಎಂದು ಮಾತುಕತೆಯಾಗಿದೆ. 4 ತಿಂಗಳ ಒಳಗಡೆ ಕ್ರಯ ಪತ್ರ ಮಾಡಿಕೊಳ್ಳದಿದ್ದರೆ ಕರಾರು ಪತ್ರ ರದ್ದಾಗುತ್ತದೆ ಮತ್ತು ಮುಂಗಡ ಹಣ ಮುಟ್ಟು ಗೋಲು ಹಾಕಿಕೊಳ್ಳಬೇಕಾಗುತ್ತದೆ ಎಂಬ ಷರತ್ತನ್ನು ಕರಾರು ಪತ್ರದಲ್ಲಿ ನಮೂದಿಸಲಾಗಿರುತ್ತದೆ. ಕ್ರಯದ ಮಾತುಕತೆಯ ದಿವಸ ಕ್ರಯದ ಪೂರ್ತಿ ಹಣ ವಾದಿಗಳ ಹತ್ತಿರ ಇತ್ತು. 11-ಇ-ಸ್ಕೆಚ್ ನ್ನು ನಾನು ನೋಡಿಲ್ಲ. ಕರಾರು ಪತ್ರ ಆದ 11 ತಿಂಗಳ ನಂತರ 11-ಇ-ಸ್ಕೆಚ್ ಆಗಿದೆ ಎಂದು 2ನೇ ವಾದಿ ನನಗೆ ತಿಳಿಸಿರುತ್ತಾರೆ. ಕ್ರಯದ ಕರಾರು ಮಾತು ಕತೆಯಾಗುವ ಕಾಲಕ್ಕೆ ನಾನು, ಶ್ರೀಧರ್ ವಾದಿಗಳು ಕೃಷ್ಣಪ್ಪ ಮತ್ತು ಪ್ರತಿವಾದಿ ಇದ್ದೆವು. ಆವತ್ತು ಶ್ರೀಧರ್ ರವರು ಕ್ರಯಕ್ಕೆ ಸಹಿ ಮಾಡಿಲ್ಲ.

ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕ್ರಯದ ವ್ಯವಹಾರ ನಡೆಯುವ ಕಾಲಕ್ಕೆ ಶ್ರೀಧರ್ ರವರು ಇದ್ದರು ಎಂದು ತಿಳಿಸಿದ್ದೇನೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡುವಾಗ ಕ್ರಯದ ವ್ಯವಹಾರ ನಡೆಯುವ ಕಾಲಕ್ಕೆ ಶ್ರೀಧರ್ ರವರು ಇದ್ದರು ಎಂದು ವಕೀಲರಿಗೆ ತಿಳಿಸಿರುತ್ತೇನೆ. ದಿ.01.12.2019 ರಂದು ಪ್ರತಿವಾದಿಯ ಮನೆಯಲ್ಲಿ ಮಾತುಕತೆಯಾಗಿರುವ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ

ತಿಳಿಸಿರುತ್ತೇನೆ. ಕ್ರಯದ ಮಾತುಕತೆಯಕಾಲಕ್ಕೆ ನಾನು, ಶ್ರೀಧರ್, ಕೃಷ್ಣಪ್ಪರವರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಸ್ನೇಹಿತರಾದ್ದರಿಂದ ಕ್ರಯದ ಕರಾರು ಪತ್ರ ಬರೆಸಿದ ನಂತರ ನನ್ನನ್ನು ಕರೆಸಿಕೊಂಡು ಕರಾರು ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

Sd/-
ಅಧಿಕ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ